ಸಿ.ಸಿ.ನಂ. 8458/2011

ಪ್ರಾಸಾಃ 1

ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ

| | |
|---|---|
| ಸಾಕ್ಷಿದಾರರ ಹೆಸರು | ಬಿ.ಆರ್. ನಾಗರಾಜು |
| ತಂದೆಯ ಹೆಸರು | ದಿಃ ಬಿ.ಸಿ. ರಾಮಯ್ಯ |
| ವಯಸ್ಸು | 45 |
| ಉದ್ಯೋಗ | ಹೆಚ್.ಸಿ. 6699 |
| ವಾಸ | ಮಡಿವಾಳ ಪೊಲೀಸ್ ಠಾಣೆ, ಬೆಂಗಳೂರು |

ಇಂದು ದಿನಾಂಕಃ **03.01.2023** ರಂದು ಸಾಕ್ಷಿಗೆ **ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ದಂ.ಸಂ.ಪ್ರ. ಕಲಂ 299 ರಡಿಯಲ್ಲಿ ಹಿರಿಯ ಸಸಅ ಅವರಿಂದಃ**

1. ನಾನು 2016 ರಿಂದ 2021 ರವರೆಗೆ ಬೊಮ್ಮನಹಳ್ಳಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದೆ.

2. ದಿಃ 06.03.2021 ರಂದು ಚಂದ್ರಲೇಔಟ್ ನ ಪೊಲೀಸ್ ಠಾಣೆ ಸರಹದ್ದಿನ ಅಮೃತ್ ಸಾಗರ್ ಬೇಕರಿ ಮುಂಭಾಗದಲ್ಲಿ ಬೆಳಗ್ಗೆ 9 ರಿಂದ 10 ಗಂಟೆಯ ವರೆಗೆ ಪಂಚರ ಸಮಕ್ಷಮ ಎಲ್ಲಾ ಸಾರ್ವಜನಿಕರಿಗೆ ವಿಷಯ ತಿಳಿಸಿ ಬಸ್ ಸ್ಟ್ಯಾಂಡ್ ನಲ್ಲಿ, ನಾಯಂಡಳ್ಳಿಯ ರೈಲು ನಿಲ್ದಾಣದಲ್ಲಿ ಆರೋಪಿಯ ಹಾಜರಾತಿ ಸಲುವಾಗಿ ನೀಡಿದ ಉದ್ಘೋಷಣೆಯನ್ನು ಜೋರಾಗಿ ಕೂಗಿ ಹೇಳಿದೆನು. ನಂತರ ಈ ಕುರಿತು ಡಂಗೂರ ಸಾರಿದೆವು. ನಂತರ ಸದರಿ ಉದ್ಘೋಷಣೆಯ ಬಿತ್ತಿ ಪತ್ರಗಳನ್ನು ಅಲ್ಲಿ ಗೋಡೆಗೆ ಅಂಟಿಸಿ, ಈ ಕುರಿತು ಪಂಚನಾಮೆಯನ್ನು ಜರುಗಿಸಿದೆನು. ಉದ್ಘೋಷಣೆಯ ವಾರಂಟ್ ಅನ್ನು ನಿಪಿ 1, ಉದ್ಘೋಷಣೆಯ ಪಂಚನಾಮೆಯನ್ನು ನಿಪಿ 2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 2(ಎ), ಜಪ್ತಿ ಆದೇಶದ ವಾರೆಂಟನ್ನು ನಿಪಿ 3,

ಬಿಬಿಎಂಪಿ ಸಹಾಯಕ ಕಂದಾಯ ಅಧಿಕಾರಿ, ಚಂದ್ರಾ ಬಡಾವಣೆ ಇವರು ನೀಡಿದ ವರದಿಯನ್ನು ನಿಪಿ 4 ಎಂದು ಗುರುತಿಸಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಪಾಟೀಲ ವೀರನಗೌಡ ಎಸ್.)

ಮು. ಮ. ಚಂ. ನ್ಯಾ. ಬೆಂ. ನಗರ.